ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401

**Phone No. : 08183 226071** **Email: sagardcf@rediffmail.com**

ಕ್ರ:ಬಿ1/ಭೂಮಿ/ಎಫ್‌ಸಿ/ರೋಡ್/156224/2022-23 ದಿ: 16-08-2022

ಗೆ,

ಕಾರ್ಯನಿರ್ವಾಹಕ ಅಭಿಯಂತರರು,

ನ್ಯಾಷನಲ್ ಹೈವೆ ಡಿವಿಷನ್,

APMC-Yard, ಶಿವಮೊಗ್ಗ.

ಮಾನ್ಯರೇ,

**Proposal No. FP/KA/ROAD/156224/2022**

ವಿಷಯ:- Diversion of 5.12 Ha of Forest Land in Hosanagara (T), Shimoga (D) for Construction of 2L+PS Road from km 55.60 to km 90.70 Mavina koppa of NH 766 C with Major Bridgs across Sharavathi Back Water.

ಉಲ್ಲೇಖ:-
1. ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಕೆಯಾದ ಎಫ್.ಸಿ ಪ್ರಸ್ತಾವನೆ ಸಂಖ್ಯೆ: FP/KA/ROAD/156224/2022
2. ನಿಮ್ಮ ಕಛೇರಿ ಪತ್ರ ಸಂಖ್ಯೆ: EE/NHD/SMG/AE-1/Re-align/NH 766c/KM 56 to 89/2022-23/545 ದಿನಾಂಕ: 16-06-2022.
3. ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರ ಕಛೇರಿ ಪತ್ರ ಸಂಖ್ಯೆ: 401/2022-23 ದಿನಾಂಕ: 08-08-2022.
4. ವಲಯ ಅರಣ್ಯಾಧಿಕಾರಿ, ಹೊಸನಗರ ವಲಯ, ಹೊಸನಗರ ಇವರ ಕಛೇರಿ ಪತ್ರ ಸಂಖ್ಯೆ: 518/2022-23 ದಿನಾಂಕ: 08-08-2022.
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪವಿಭಾಗ, ಹೊಸನಗರ ಇವರ ಕಛೇರಿ ಪತ್ರ ಸಂಖ್ಯೆ: 521/2022-23 ದಿನಾಂಕ: 08-08-2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ Diversion of 5.12 Ha of Forest Land in Hosanagara (T), Shimoga (D) for Construction of 2L+PS Road from km 55.60 to km 90.70 Mavina koppa of NH 766 C with Major Bridgs across Sharavathi Back Water ಯೋಜನೆಗಾಗಿ ಸಾಗರ ವಿಭಾಗ ವ್ಯಾಪ್ತಿಗೆ ಒಳಪಡುವ 5 ಗ್ರಾಮಗಳಿಂದ ಒಟ್ಟು 5.12 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ನೀವು ಉದ್ದೇಶಿಸಿ, ಉಲ್ಲೇಖ (1)ರಲ್ಲಿ ಪರಿವೇಶ್ ತಂತ್ರಾಂಶದಲ್ಲಿ ಅರಣ್ಯ ಭೂಮಿ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತೀರಾ.

ವಲಯ ಅರಣ್ಯಾಧಿಕಾರಿಗಳು, ನಗರ ಮತ್ತು ಹೊಸನಗರ ವಲಯ ಇವರು ಪ್ರಸ್ತಾವನೆಯಲ್ಲಿ ನಮೂದಿಸಿದ ಸ್ಥಳಗಳಗೆ ಭೇಟಿ ನೀಡಿ ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ನಕಾಶೆಯಂತೆ ಸ್ಥಳ ಪರಿಶೀಲಿಸಿ, ಸ್ಥಳ ಪರಿಶೀಲನಾ ವರದಿಯನ್ನು ಉಲ್ಲೇಖ (3) & (4)ರಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತಾರೆ ಹಾಗೂ ಸದರಿ ಸ್ಥಳ ಪರಿಶೀಲನಾ ವರದಿಯನ್ನು ಉಲ್ಲೇಖ(5) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ ಇವರು ಅನುಮೋದಿಸಿರುತ್ತಾರೆ. ಪ್ರಸ್ತಾವನೆಯಲ್ಲಿ ಹೊಸನಗರ ಮತ್ತು ನಗರ ವಲಯ ವ್ಯಾಪ್ತಿಯ 5 ಗ್ರಾಮಗಳ 6 ವಿವಿಧ ಸರ್ವೆ ನಂಬರ್‌ಗಳಿಂದ ಒಟ್ಟು 5.12 ಹೆಕ್ಟೇರ್ ಅರಣ್ಯ ಪ್ರದೇಶ ಬಳಕೆಯಾಗಲಿದೆ ಎಂದು ನಮೂದಿಸಲಾಗಿರುತ್ತದೆ. ಆದರೆ ವಲಯ ಅರಣ್ಯಾಧಿಕಾರಿ, ನಗರ ವಲಯ, ನಗರ ಇವರ ಸ್ಥಳ ಪರಿಶೀಲನಾ ವರದಿಯಲ್ಲಿ, ಪ್ರಸ್ತಾವನೆಯಲ್ಲಿ ನೀವು ಕಂದಾಯ ದಾಖಲೆಯಾದ ಆರ್.ಟಿ.ಸಿ ಪ್ರಕಾರ ಅರಣ್ಯ ಪ್ರದೇಶಗಳನ್ನು ಗುರುತಿಸಿ, ಸದರಿ ಪ್ರದೇಶಗಳ ಬಿಡುಗಡೆಗೆ ಪರಿವೇಶ್ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತೀರಾ. ಆದರೆ ಅರಣ್ಯ ದಾಖಲೆಗಳ ಪ್ರಕಾರ ನಿಮ್ಮ ಪ್ರಸ್ತಾವನೆಯಲ್ಲಿ ಹಲವು ಸರ್ವೆ ನಂಬರ್‌ಗಳನ್ನು ಕೈಬಿಟ್ಟಿರುವುದು ಕಂಡುಬಂದಿರುತ್ತದೆ.

ಸ್ಥಳ ಪರಿಶೀಲನಾ ವರದಿಯಂತೆ ನೀವು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ವಿಸ್ತೀರ್ಣಕ್ಕಿಂತ ಸ್ಥಳದಲ್ಲಿ ಗುರುತಿಸಿರುವ ಪ್ರದೇಶದ ನೈಜ ವಿಸ್ತೀರ್ಣವು ಹೆಚ್ಚಾಗಿರುವುದಾಗಿ ತಿಳಿದುಬಂದಿದ್ದು, ಕೆಲವು ಅರಣ್ಯ ಸರ್ವೆ ನಂಬರ್‌ಗಳನ್ನು ಪ್ರಸ್ತಾವನೆಯಲ್ಲಿ ಪ್ರಸ್ತಾವನೆಯಲ್ಲಿ ನಮೂದಿಸಿರುವುದಿಲ್ಲ ಆದ್ದರಿಂದ ನೀವು ವಲಯ ಅರಣ್ಯಾಧಿಕಾರಿ, ನಗರ ಮತ್ತು ಹೊಸನಗರ ವಲಯ, ಇವರೊಂದಿಗೆ ಸಮನ್ವಯ ಸಾಧಿಸಿ ಪ್ರಸ್ತಾಪಿತ ಯೋಜನೆಯಲ್ಲಿ ನಿಖರವಾಗಿ ಬಳಕೆಯಾಗುವ ಅರಣ್ಯ ಪ್ರದೇಶದ ವಿಸ್ತೀರ್ಣಕ್ಕೆ ಅನ್ವಯಿಸುವಂತೆ ಪರಿಷ್ಕೃತ ಯೋಜನಾ ನಕಾಶೆಗಳನ್ನು (ಟೋಪೊ ಮತ್ತು ಗ್ರಾಮ ನಕಾಶೆ) ತಯಾರಿಸಿ ಹಾಗೂ ಪರಿವೇಶ್ ತಂತ್ರಾಂಶದ ಪಾರ್ಟ್-1ರಲ್ಲಿ ಸೂಕ್ತತಿದ್ದುಪಡಿ ಮಾಡಿ ಪರಿಷ್ಕೃತ ಪ್ರಸ್ತಾವನೆಯನ್ನು ಪರಿವೇಶ್ ತಂತ್ರಾಂಶದಲ್ಲಿ ಮರು ಸಲ್ಲಿಸಲು ಮತ್ತು ಪರಿಷ್ಕೃತ ಪ್ರಸ್ತಾವನೆಯ 08 ಸೆಟ್‌ಗಳನ್ನು ಈ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ನಿಮ್ಮಲ್ಲಿ ಕೋರಲಾಗಿದೆ.

ನಿಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ